# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.06/2009–10 ದಿನಾಂಕ:20–01–2010

## –:: ಅಲ್ಪಾವಧಿ ಮರುಟೆಂಡರ್ ಪ್ರಕಟಣೆ ::–

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ(ಸಿಎಂಎಸ್ಎಂಟಿಡಿಪಿ) ಯೋಜನೆಯಡಿಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಇವುಗಳನ್ನು ನಿರ್ವಹಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನಗರಸಭೆ ದೊಡ್ಡಬಳ್ಳಾಪುರ ಕಛೇರಿಯಲ್ಲಿ ನೊಂದಾಯಿತ 2ನೇ ಮತ್ತು ಮೇಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ: 08–02–2010 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06–02–2010 ಮಧ್ಯಾಹ್ನ 2.00ಗಂಟೆವರೆಗೆ
2. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 06–02–2010

ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ನೀಡಿರುವ ಕಾಲಾವಧಿ: 90ದಿನಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ(ರೂ. ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಪ್ಯಾಕೇಜ್ ನಂ.01: (1)ರೋಜಿಪುರ ಟ್ಯಾಂಕ್‌ನಿಂದ ಕೋರ್ಟ್ ರಸ್ತೆವರೆಗೆ 6" ಪೈಪ್ ಲೈನ್ ಹಾಕುವ ಕೆಲಸ.(2)ಆಲಹಳ್ಳಿ ಪಂಪ್‌ಹೌಸ್‌ನಿಂದ ಪ್ರಕಾಶ್ ರವರ ತೋಟದವರೆವಿಗೂ 8" ಪೈಪ್‌ಲೈನ್ ಹಾಕುವ ಕೆಲಸ.(3)ಜೆ.ಸಿ ಸರ್ಕಲ್ ಪಂಪ್ ಹೌಸ್‌ನಿಂದ ರಂಗಪ್ಪ ಸರ್ಕಲ್‌ವರೆವಿಗೂ 6" ಪೈಪ್ ಲೈನ್ ಹಾಕುವ ಕೆಲಸ. | 20.00 | 50000.00 | 2000.00+ ತೆರಿಗೆ |
| 2 | ಪ್ಯಾಕೇಜ್ ನಂ.02: (1)ಮೇಘಾಂಜಲಿ ಛತ್ರದಿಂದ ಕೊಂಗಾಡಿಯಪ್ಪ ಕಾಲೇಜು ರಸ್ತೆಯ ಬಸವಣ್ಣ ದೇವಸ್ಥಾನದ ವರೆಗೆ 8" ಪೈಪ್‌ಲೈನ್ ಹಾಕುವ ಕೆಲಸ.(2)ಚಿಕ್ಕಬಳ್ಳಾಪುರ ರಸ್ತೆಯ ನಂದಿಮೋರಿಯ ಕೊಳವೆಬಾವಿಯಿಂದ ಐ.ಬಿ ಸರ್ಕಲ್ ಮುಖಾಂತರ ಕೋರ್ಟ್ ಮುಂಭಾಗದ ವರೆಗೆ 6" ಪೈಪ್‌ಲೈನ್ ಹಾಕುವ ಕೆಲಸ.(3)ಮುತ್ಯಾಲಮ್ಮ ದೇವಸ್ಥಾನದ ರಸ್ತೆಯ ತೋಟಪ್ಪನವರ ಹಳೇಮನೆಯಿಂದ ಮುಗವಾಳಪ್ಪ ಸರ್ಕಲ್‌ವರೆವೆಗೂ 6" ಪೈಪ್‌ಲೈನ್ ಹಾಕುವದು ಹಾಗೂ ಆನೆ ಟ್ಯಾಂಕ್‌ವರೆಗೂ 3" ಪೈಪ್‌ಲೈನ್ ಹಾಕುವ ಕೆಲಸ. | 20.00 | 50000.00 | 2000.00+ ತೆರಿಗೆ |
| 3 | ಪ್ಯಾಕೇಜ್ ನಂ.03: (1)ಅಂಬೇಡ್ಕರ್ ರಸ್ತೆಯಿಂದ ರಾಜೇಂದ್ರರವರ ಮನೆವರೆಗಿನ ರಸ್ತೆ ಹಾಗೂ ಪದ್ಮನಾಭರವರ ಮನೆ ಮುಂಭಾಗದ ರಸ್ತೆಗಳನ್ನು ಅಭಿವೃಧ್ಧಿ ಮಾಡುವ ಕೆಲಸ.(2)ಕೋರ್ಟ್ ರಸ್ತೆಯಿಂದ ಬಂಟು ಮನೆವರೆಗೆ ಜಲ್ಲಿ ರಸ್ತೆ ಹಾಗೂ ಚರಂಡಿ ಮಾಡುವ ಕೆಲಸ.(3)ರೋಜಿಪುರದ ಕೋರ್ಟ್ ರಸ್ತೆ ಮುಂಭಾಗದಲ್ಲಿ ಬರುವ ರಸ್ತೆಗಳನ್ನು ಅಭಿವೃಧ್ಧಿ ಮಾಡುವ ಕೆಲಸ.(4)ಐ.ಬಿ ಹಿಂಭಾಗದಲ್ಲಿ ಬರುವ ರಸ್ತೆಯನ್ನು ಅಭಿವೃಧ್ಧಿ ಮಾಡುವ ಕೆಲಸ. | 27.45 | 55000.00 | 2750.00 + ತೆರಿಗೆ |
| 4 | ಪ್ಯಾಕೇಜ್ ನಂ.04: ರಸ್ತೆ ಅಭಿವೃದ್ಧಿ ಕಾಮಗಾರಿಗಳು. 1)ಕರೇನಹಳ್ಳಿಯಲ್ಲಿ ಬರುವ ರಸ್ತೆಗಳನ್ನು ಅಭಿವೃಧ್ಧಿ ಮಾಡುವ ಕೆಲಸ. 2)ಭುವನೇಶ್ವರಿನಗರದಲ್ಲಿನ ವಿವಿಧ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. 3)ಗಾಣಿಗರಪೇಟೆ ಆರೂಢಿ ನಾಗರಾಜ್ ಮನೆಯಿಂದ ಮುಕ್ತಾಂಬಿಕ ರಸ್ತೆವರೆಗಿನ ರಸ್ತೆಗೆ ಕಾಂಕ್ರೀಟ್ ಹಾಕುವ ಕೆಲಸ. | 26.00 | 52000.00 | 2600.00+ ತೆರಿಗೆ |
| 5 | ಪ್ಯಾಕೇಜ್ ನಂ.05: ರಸ್ತೆ ಅಭಿವೃದ್ಧಿ ಕಾಮಗಾರಿಗಳು. 1)ಮಾರುತಿನಗರ ಏರಿ ಕೆಳಗಿನ ನಾಲ್ಕು ರಸ್ತೆಗಳನ್ನು ಅಭಿವೃಧ್ಧಿ ಮಾಡುವ ಕೆಲಸ. 2)ಸೋಮೇಶ್ವರ ಬಡಾವಣೆಯಲ್ಲಿ ಹಾಗೂ ದೇಶದಪೇಟೆಯ ವಿವಿಧ ರಸ್ತೆಗಳನ್ನು ಅಭಿವೃಧ್ಧಿ ಮಾಡುವ ಕೆಲಸ.(28) 3)ಮಧುಗಿರಿ ರಸ್ತೆಯಿಂದ ಅನ್ನಪೂರ್ಣೇಶ್ವರಿ ಸಮುದಾಯ ಭವನದ ಮುಂಭಾಗದವರೆಗೆ ಹಾಗೂ ಸೋಮೇಶ್ವರ ಬಡಾವಣೆಯಲ್ಲಿ ವಿವಿಧ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಕೆಲಸ.(31) 4)ಇಸ್ಲಾಂಪುರದಲ್ಲಿನ ವಿವಿಧ ರಸ್ತೆಗಳನ್ನು ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. 5)ಘನತ್ಯಾಜ್ಯ ವಸ್ತು ವಿಲೇವಾರಿ ನಿವೇಶನದಲ್ಲಿಲೀಚೆಟ್ ಕಲೆಕ್ಷನ್‌ಗಾಗಿ ಕಾಂಕ್ರೀಟ್ ಚರಂಡಿ ನಿರ್ಮಾಣ ಮತ್ತು ಲೀಚೆಟ್ ಟ್ಯಾಂಕ್ ನಿರ್ಮಿಸುವ ಕಾಮಗಾರಿ. | 29.15 | 58300.00 | 2950.00 + ತೆರಿಗೆ |

| | | | | |
|---|---|---|---|---|
| 6 | ಪ್ಯಾಕೇಜ್ ನಂ.06: (1)ಮುತ್ಸಂದ್ರದ ಹುಣಸೇಮರದ ಸರ್ಕಲ್‌ನಿಂದ ಉಳಿದಿರುವ ಚರಂಡಿ ಮಾಡುವ ಕೆಲಸ.(2)ಕೋರ್ಟ್ ರಸ್ತೆಯಿಂದ ರೋಜಿಪುರ ಕಾಲೋನಿವರೆಗೆ ಕಾಂಕ್ರೀಟ್ ಚರಂಡಿ ಮಾಡುವ ಕೆಲಸ.(3)ಚಂದ್ರಶೇಖರಪುರ ಮುಖ್ಯರಸ್ತೆಯಿಂದ ಅಶ್ವತ್ಥ್‌ಕಟ್ಟೆವರೆವಿಗೂ ರಸ್ತೆಬದಿ ಚರಂಡಿ ಮಾಡುವ ಕೆಲಸ.(4)ಸ್ಕೌಟ್ ಕ್ಯಾಂಪ್ ಮುಖ್ಯರಸ್ತೆಯಲ್ಲಿ ರಸ್ತೆಬದಿಚರಂಡಿ ಮಾಡುವ ಕೆಲಸ. | 26.00 | 52000.00 | 2600.00 + ತೆರಿಗೆ |
| 7 | ಪ್ಯಾಕೇಜ್ ನಂ.07: (1)ಶನಿಮಹಾತ್ಮ ದೇವಸ್ಥಾನದ ಮುಂಭಾಗದಲ್ಲಿ ರಸ್ತೆಯ ಎರಡುಬದಿ ಚರಂಡಿ ಮಾಡುವ ಕೆಲಸ.(2)ದೇವರಾಜನಗರದಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ(3)ತೇರಿನಬೀದಿ ಸರ್ಕಲ್‌ನಿಂದ ತಿಪ್ಪಾಪುರ ಚರಂಡಿವರೆಗೂ ರಸ್ತೆಬದಿ ಚರಂಡಿ ಮಾಡುವ ಕೆಲಸ(4)ಬ್ರಾಹ್ಮಣರಬೀದಿ ಪ್ರದೇಶದಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ | 25.50 | 51000.00 | 2550.00 + ತೆರಿಗೆ |
| 8 | ಪ್ಯಾಕೇಜ್ ನಂ.08: ರಸ್ತೆಬದಿ ಚರಂಡಿ ನಿರ್ಮಿಸುವ ಕಾಮಗಾರಿಗಳು. 1)ವಿದ್ಯಾನಗರದಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ. 2)ರೋಜಿಪುರದಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ. 3)ಸೋಮೇಶ್ವರ ಬಡಾವಣೆಯಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ. 4)ಇಸ್ಲಾಂಪುರದ ರಸ್ತೆಗಳಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ. | 28.50 | 57000.00 | 2850.00 +ತೆರಿಗೆ |
| 9 | ಪ್ಯಾಕೇಜ್ ನಂ.09: (1)ಮಾರುತಿನಗರದ ಏರಿ ಕೆಳಗಿನ ಮೊದಲನೇ ಅಡ್ಡರಸ್ತೆ ಹಾಗೂ ಶಾಂತಿನಗರದ 2ನೇ ಅಡ್ಡರಸ್ತೆಯಲ್ಲಿ ರಸ್ತೆಬದಿ ಚರಂಡಿ ಮಾಡುವ ಕೆಲಸ.(2)ರೋಜಿಪುರ ಕೊಳಚೆ ಪ್ರದೇಶದಿಂದ ಅಶ್ವಥ್‌ಕಟ್ಟೆವರೆವಿಗೂ ಮಳೆನೀರು ಚರಂಡಿ ಮಾಡುವ ಕೆಲಸ.(3)ಸಿದ್ದೇನಾಯಕನಹಳ್ಳಿ ಕೊಳಚೆ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಮಾಡುವ ಕೆಲಸ.(4)ಮುತ್ತೂರು ಕೊಳಚೆ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 25.50 | 51000.00 | 2550.00 +ತೆರಿಗೆ |
| 10 | ಪ್ಯಾಕೇಜ್ ನಂ.10: (1)ದತ್ತಾತ್ರೇಯ ಛತ್ರದ ಮುಂಭಾಗ ಹಾಗೂ ಸಂಜಯನಗರದಲ್ಲಿ ಬರುವ ಒಳ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಮಾಡುವ ಕೆಲಸ.(2)ವಿನಾಯಕ ನಗರ ಕಾಲೋನಿಯ ಕೊಳಚೆ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಚರಂಡಿ ಮಾಡುವ ಕೆಲಸ(3)ರೋಜಿಪುರ ಕಾಲೋನಿಯ ಕೊಳಚೆ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಚರಂಡಿ ಮಾಡುವ ಕೆಲಸ | 30.00 | 60000.00 | 3000.00 +ತೆರಿಗೆ |
| 11 | ಪ್ಯಾಕೇಜ್ ನಂ.11: (1)ಪಿಂಜಾರುಬೀಡು ಕೊಳಚೆ ಪ್ರದೇಶದ ಕಾಲೋನಿಯಲ್ಲಿ ಬರುವ ರಸ್ತೆಗಳಿಗೆ ಚರಂಡಿ ಮಾಡುವ ಕೆಲಸ.(2)ಕಛೇರಿಪಾಳ್ಯ ಕೊಳಚೆ ಪ್ರದೇಶದಲ್ಲಿ ಬರುವ ರಸ್ತೆಗಳಿಗೆ ಚರಂಡಿ ಮಾಡುವ ಕೆಲಸ.(3)ತಿಪ್ಪಾಪುರ ರಸ್ತೆಯ ನಿವೇದಿತಾ ಶಾಲೆ ಹಿಂಭಾಗ ಉಳಿದಿರುವ ಮಳೆನೀರು ಚರಂಡಿ ಮಾಡುವ ಕೆಲಸ. | 30.00 | 60000.00 | 3000.00 +ತೆರಿಗೆ |
| 12 | ಪ್ಯಾಕೇಜ್ ನಂ.12: ರಸ್ತೆ ಅಭಿವೃದ್ಧಿ ಕಾಮಗಾರಿಗಳು. 1)ನಗರಸಭಾ ಕಾರ್ಯಾಲಯದ ಪಕ್ಕದ ಉದ್ಯಾನವನಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು ನಿರ್ಮಾಣ ಕಾಮಗಾರಿ. 2)ತಾಲ್ಲೂಕು ಕಛೇರಿ ಆವರಣದಲ್ಲಿ ವಾಹನಗಳ ಪಾರ್ಕಿಂಗ್ ಶೆಡ್ ನಿರ್ಮಾಣ ಕಾಮಗಾರಿ. 3)ನಗರಸಭಾ ವ್ಯಾಪ್ತಿಯ ಸ್ಮಶಾನಗಳಿಗೆ ತಂತಿ ಬೇಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿ. | 21.50 | 50000.00 | 2150.00 +ತೆರಿಗೆ |
| 13 | ಪ್ಯಾಕೇಜ್ ನಂ.13:ನಗರದಲ್ಲಿ ಬರುವ ಎಲ್ಲಾ ವಾರ್ಡ್‌ಗಳಿಗೆ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸುವ ಕೆಲಸ. | 10.00 | 25000.00 | 1000.00 +ತೆರಿಗೆ |
| 14 | ಪ್ಯಾಕೇಜ್ ನಂ.14:ವಿನಾಯಕನಗರದ ಸರ್ಕಾರಿ ಶಾಲೆ ಹಿಂಭಾಗದಿಂದ ಕೋರ್ಟ್ ಮುಂಭಾಗದವರೆಗೆ ಮಳೆನೀರು ಚರಂಡಿ ಮಾಡುವ ಕೆಲಸ. | 20.00 | 50000.00 | 2000.00 +ತೆರಿಗೆ |
| 15 | ಪ್ಯಾಕೇಜ್ ನಂ.15:ಕೋರ್ಟ್ ರಸ್ತೆಯಲ್ಲಿ ತೋಟಗಾರಿಕಾ ಇಲಾಖೆಯ ಪಕ್ಕದಲ್ಲಿ ಮಳೆನೀರು ಚರಂಡಿ ಮಾಡುವ ಕೆಲಸ. | 20.00 | 50000.00 | 2000.00 +ತೆರಿಗೆ |
| 16 | ಪ್ಯಾಕೇಜ್ ನಂ.16:ಘನತ್ಯಾಜ್ಯ ವಸ್ತು ವಿಲೇವಾರಿ ನಿವೇಶನದಲ್ಲಿ ವಿಂಡ್ ರೋ ಪ್ಲಾಟ್‌ಫಾರಂಗಾಗಿ ಕಾಂಕ್ರೀಟ್ ಯಾರ್ಡ್ ನಿರ್ಮಾಣದ ಕಾಮಗಾರಿ. | 48.60 | 97200.00 | 4900.00 +ತೆರಿಗೆ |
| 17 | ಪ್ಯಾಕೇಜ್ ನಂ.17:ವಿದ್ಯಾನಗರದಲ್ಲಿ ವಿವಿಧರಸ್ತೆಗಳನ್ನು ಅಭಿವೃದ್ಧಿ ಮಾಡುವ ಕೆಲಸ.(9ಹಾಗೂ19) | 19.00 | 47500.00 | 1900.00 +ತೆರಿಗೆ |

| | | | | |
|---|---|---|---|---|
| 18 | ಪ್ಯಾಕೇಜ್ ನಂ.18:ಶಾಂತಿನಗರದ 1ನೇ ಅಡ್ಡರಸ್ತೆಯಲ್ಲಿನ ಉಳಿದ ಭಾಗ ಹಾಗೂ 2ನೇ ಮತ್ತು 4ನೇ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 18.00 | 45000.00 | 1800.00 +ತೆರಿಗೆ |

**ಷರತ್ತುಗಳು:–**

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿ ಸಲ್ಲಿಸತಕ್ಕದ್ದು.
2. ಇ.ಎಂ.ಡಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಟೆಂಡರ್ ಲಕೋಟೆಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಪ್ಯಾಕೇಜ್‌ನ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು, ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.
3. ಕಾಮಗಾರಿಗಳು ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.
4. ಕ್ರಮ ಸಂ.13ರ ಕಾಮಗಾರಿಗೆ ವಿದ್ಯುತ್ ಪರೀವೀಕ್ಷಕರವರಿಂದ ಪರವಾನಿಗೆ ಪಡೆದ ಗುತ್ತಿಗೆದಾರರು ಮಾತ್ರ ಭಾಗವಹಿಸುವುದು.
5. ಟೆಂಡರ್ ಮಂಜೂರಾದ ಗುತ್ತಿಗೆದಾರರು ಕಾಮಗಾರಿಗಳ ಗುತ್ತಿಗೆ ಮೊತ್ತದ ಶೇ.5ರಷ್ಟು ಭದ್ರತಾ ಠೇವಣಿ ಹಣವನ್ನು ಡಿ.ಡಿ ಮೂಲಕ ಪೌರಾಯುಕ್ತರು ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಸಲ್ಲಿಸಿದ ನಂತರ ಕಾರ್ಯಾದೇಶ ನೀಡಲಾಗುವುದು
6. ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು,
7. ಎರಡು ವರ್ಷ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರೇ ಬರಿಸುವುದು.
8. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ,
9. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

ಸಹಿ/–
**(ಮಲ್ಲಿಕಾರ್ಜುನ್)**
ಅಧ್ಯಕ್ಷರು
ನಗರಸಭೆ, ದೊಡ್ಡಬಳ್ಳಾಪುರ.

ಸಹಿ/–
**(ಎಸ್.ಪ್ರಭುದೇವ್ )**ಕೆ.ಎಂ.ಎ.ಎಸ್.
ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ

"ನಕಲು ಪ್ರತಿ"

ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ.